ಕರ್ನಾಟಕ ವಿಧಾನ ಸಭೆ, ಸಂಶೋಧನಾ ಹಾಗೂ ಉಲ್ಲೇಖನಾ ಶಾಖೆ

KARNATAKA LEGISLATIVE ASSEMBLY RESEARCH AND REFERENCE BRANCH

ಪತ್ರಿಕಾ ತುಣುಕುಗಳು

PAPER CLIPPINGS

ಇಲಾಖೆ / ವಿಷಯ : DEPARTMENT / SUBJECT: ಇತರೆ

ಪತ್ರಿಕೆಯ ಹೆಸರು : NAME OF THE NEWS PAPER: ವಿಜಯವಾಣಿ ದಿನಾಂಕ : DATE 20/12/19

## ಹೃದಯಾಘಾತದಿಂದ ನಿಧನ । ಶಹಾಪುರದಲ್ಲಿ ಇಂದು ಅಂತ್ಯಕ್ರಿಯೆ

# ಶಿಶು ಸಾಹಿತಿ ಚಂದ್ರಕಾಂತ ಕರದಳ್ಳಿ ಇನ್ನಿಲ್ಲ

■ ವಿಜಯವಾಣಿ ಸುದ್ದಿಜಾಲ ಯಾದಗಿರಿ



ಹಿರಿಯ ಶಿಶು ಸಾಹಿತಿ ಚಂದ್ರಕಾಂತ ಕರದಳ್ಳಿ (68) ತೀವ್ರ ಹೃದಯಾಘಾತದಿಂದ ಬೆಂಗಳೂರಿನಲ್ಲಿ ಗುರುವಾರ ನಿಧನರಾದರು. ಕನ್ನಡ ಸಾಹಿತ್ಯ ಲೋಕಕ್ಕೆ ಅನನ್ಯ ಕೊಡುಗೆ ನೀಡಿದ್ದ ಮೃತರು ಪತ್ನಿ, ಇಬ್ಬರು ಪುತ್ರರು, ಅಪಾರ ಬಂಧುಗಳು ಮತ್ತು ಅಭಿಮಾನಿಗಳನ್ನು ಅಗಲಿದ್ದಾರೆ. ಶಹಾಪುರದಲ್ಲಿ ಶುಕ್ರವಾರ ಮೃತರ ಅಂತ್ಯಕ್ರಿಯೆ ಜರುಗಲಿದೆ.

ವೃತ್ತಿಯಿಂದ ಶಿಕ್ಷಕರಾಗಿದ್ದ ಕರದಳ್ಳಿ, ರಾಷ್ಟ್ರಮಟ್ಟದ ಉತ್ತಮ ಶಿಕ್ಷಕ ಪ್ರಶಸ್ತಿಗೆ ಭಾಜನರಾಗಿದ್ದರು. 2019 ಇವರ ಪಾಲಿಗೆ ಅದೃಷ್ಟದ ವರ್ಷವಾಗಿತ್ತು. ಎರಡು ಶ್ರೇಷ್ಠ ಪ್ರಶಸ್ತಿಗಳಾದ ಕರ್ನಾಟಕ ರಾಜ್ಯೋತ್ಸವ ಹಾಗೂ ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ಪಡೆಯುವ ಮೂಲಕ ತಮ್ಮ ಸಾಹಿತ್ಯ ಕೃಷಿಯ ಪ್ರಬುದ್ಧತೆ ಮತ್ತು ಪರಿಣತಿಯನ್ನು ತೋರಿಸಿಕೊಟ್ಟಿದ್ದರು.

1952ರ ಆಗಸ್ಟ್ 25ರಂದು ರಾಚಯ್ಯ ಸ್ವಾಮಿ ಮತ್ತು ಮುರಿಗೆಮ್ಮ ದಂಪತಿ ಮಗನಾಗಿ ಜನಿಸಿದ ಚಂದ್ರಕಾಂತ ಕರದಳ್ಳಿ ಧಾರವಾಡ ಕರ್ನಾಟಕ ವಿಶ್ವವಿದ್ಯಾಲಯದಿಂದ ಸ್ನಾತಕ ಮತ್ತು ಕನ್ನಡದಲ್ಲಿ ಸ್ನಾತಕೋತ್ತರ ಮತ್ತು ಬಿಇಡಿ ಪದವಿ ಪಡೆದು ಸರ್ಕಾರಿ ಶಿಕ್ಷಕರಾಗಿ ವೃತ್ತಿಜೀವನ ಆರಂಭಿಸಿದರು. ಮೊದಲು ಪ್ರಾಥಮಿಕ, ನಂತರ ಪ್ರೌಢ ಶಾಲಾ ಶಿಕ್ಷಕರಾಗಿ 33 ವರ್ಷ ಕರ್ತವ್ಯ ನಿರ್ವಹಿಸಿದ್ದರು. ಸಗರಾದ್ರಿ ಸಾಂಸ್ಕೃತಿಕ ಪರಂಪರೆ ನೆಲದಲ್ಲಿ ಸಾಹಿತ್ಯ ಕೃಷಿ ಮೂಲಕ ಪ್ರಬುದ್ಧ, ವೈವಿಧ್ಯಮಯವಾದ ಮೌಲಿಕ ಕೃತಿಗಳನ್ನು ಕನ್ನಡಕ್ಕೆ ನೀಡಿದ್ದಾರೆ. ಮಕ್ಕಳ ಸಾಹಿತ್ಯದ ವಿವಿಧ ಪ್ರಕಾರಗಳಲ್ಲಿ ಕೃಷಿ ಮಾಡಿರುವ ಚಂದ್ರಕಾಂತ ಕರದಳ್ಳಿ 47ಕ್ಕೂ ಹೆಚ್ಚು ಶಿಶು ಕಥೆ, ಮಕ್ಕಳ ಪ್ರವಾಸ ಕಥನ, ನಾಟಕ, ಕಥಾ ಸಂಕಲನಗಳನ್ನು ಕನ್ನಡ ಸಾರಸ್ವತ ಲೋಕಕ್ಕೆ ಸಮರ್ಪಿಸಿದ್ದಾರೆ. ಆನೆ ಬಂತು ಆನೆ, ನಲಿದಾಡು ಬಾ ನವಿಲೆ, ಮಾವಿನ ಮರ ಬೆಳೆದಿದ್ದು ಹೀಗೆ ಮತ್ತು ಇತರ ಕಥೆ, ಉಪ್ಪಿನ ಗೊಂಬೆಯ ಹುಟ್ಟೂರು ಮತ್ತು ಇತರ ಕಥೆ, ಬಯಲು ಸೀಮೆಯಿಂದ ಕರಾವಳಿಗೆ ಮಹಾಜಿಪುಣ ಮೈದಾಸ, ಉಪ್ಪಿನ ಗೊಂಬೆ, ಮಾಯದ ಗಂಟೆ, ಸಗರಾದ್ರಿ ಚಾರಣ, ಕಾಡು ಕನಸಿನ ಬೀಡಿಗೆ ಇವು ಕರದಳ್ಳಿ ಅವರ ಪ್ರಮುಖ ಕೃತಿಗಳು.

ಉತ್ತಮ ಶಿಕ್ಷಕ ರಾಜ್ಯ ಪ್ರಶಸ್ತಿ, ಉತ್ತಮ ಶಿಕ್ಷಕ ರಾಷ್ಟ್ರ, ಸಂಕ್ರಮಣ ಸಾಹಿತ್ಯ, ಶಿಕ್ಷಣ ಸಿರಿ, ಸಾಕ್ಷಿ ಮಕ್ಕಳ ಸಾಹಿತ್ಯ, ಸಿಸು ಸಂಗಮೇಶ ಪತ್ತಿ, ಸಿದ್ಧಾರ್ಥ ಮಕ್ಕಳ ಸಾಹಿತ್ಯ, ಮಕ್ಕಳ ಚಂದಿರ ಹೀಗೆ ಹಲವು ರಾಜ್ಯ ಮತ್ತು ರಾಷ್ಟ್ರಮಟ್ಟದ ಪ್ರಶಸ್ತಿ ಗೌರವಕ್ಕೆ ಭಾಜನರಾಗಿದ್ದ ಚಂದ್ರಕಾಂತ ಕರದಳ್ಳಿ ಅವರು ಶಹಾಪುರ ತಾಲೂಕು ಪ್ರಥಮ ಸಾಹಿತ್ಯ ಸಮ್ಮೇಳನ ಹಾಗೂ ಯಾದಗಿರಿ ಜಿಲ್ಲಾ ಎರಡನೇ ಸಾಹಿತ್ಯ ಸಮ್ಮೇಳನ ಅಧ್ಯಕ್ಷರಾಗಿದ್ದರು. ಅಲ್ಲದೆ ಕಲಬುರಗಿ ಆಕಾಶವಾಣಿಯಿಂದ ನೂರಾರು ಚಿಂತನೆಗಳು ಬಿತ್ತರಗೊಂಡಿದ್ದು ಅವರ ಸಾಹಿತ್ಯ ಸೇವೆಗೆ ಹಿಡಿದ ಕನ್ನಡಿ.

... ಎಂದು ಅಲ್ಪಸಂಖ್ಯಾತರ ಕಲ್ಯಾಣ ಸಚಿವ ಪ್ರಭ